# ಕೃತಜ್ಞತಾರ್ಪಣೆ 2022

ಆತ್ಮೀಯ ಸಹೋದರರೇ ಸಹೋದರಿಯರೇ,

ನಾವು, ಅಕ್ಟೋಬರ್ 2, 2022, ಭಾನುವಾರದಂದು ನಮ್ಮ ಚರ್ಚಿನ ಕೃತಜ್ಞತಾರ್ಪಣೆಯ ದಿನವನ್ನು ಸಮೀಪಿಸುತ್ತಿರುವಂತೆ, ನಾವು ಯಾವುದಕ್ಕಾಗಿ ಕೃತಜ್ಞರಾಗಿರುವೆವೆಂಬುದರ ಕುರಿತು ಚಿಂತನೆ ಮಾಡಲು ಮತ್ತೊಂದು ಅವಕಾಶವನ್ನು ಹೊಂದಿರುತ್ತೇವೆ: ನಮ್ಮ ನಂಬಿಕೆ, ಕುಟುಂಬ, ಸ್ನೇಹಿತರು ಮತ್ತು ನಮ್ಮ ಜೀವಿತಗಳಲ್ಲಿರುವ ಇನ್ನು ಅನೇಕ ರೀತಿಯ ಆಶೀರ್ವಾದಗಳು.

ಸಾಮಾನ್ಯವಾಗಿ ನಮ್ಮ ಕೃತಜ್ಞತೆಯು ಭೂತಕಾಲ ಮತ್ತು ವರ್ತಮಾನವನ್ನು ಒಳಪಡಿಸುತ್ತದೆ, ಇದು ಈಗಾಗಲೇ ದೇವರನ್ನು ಕೃತಜ್ಞತೆ ಸಲ್ಲಿಸಲು ಸಾಕಷ್ಟು ಕಾರಣ ಒದಗಿಸುತ್ತದೆ!

ನಮ್ಮ ಕೃತಜ್ಞತೆಗೆ ಇನ್ನೂ ಹೆಚ್ಚಿನ ಸಮರ್ಥನೆ ಹೊಂದಿರುವ ಭವಿಷ್ಯದ ಕಡೆಗೆ ನಾವು ನೋಡಬೇಕೆಂದು ನಾನು ಬಯಸುತ್ತೇನೆ. ಇಂದಿನ ದಿನದಲ್ಲಿ ನಾವು ನಮ್ಮ ಜೀವಿತದಲ್ಲಿ ಹೊಂದಿರುವ ಯಾವುದನ್ನೂ ನಮ್ಮ ತ್ರಯೈಕ ದೇವರು ನಮಗಾಗಿ ಭವಿಷ್ಯತ್ತಿನಲ್ಲಿ ಇಟ್ಟಿರುವುದರೊಂದಿಗೆ ಹೋಲಿಸಲಾರೆವು. ನಾವು ದೇವರ ರಕ್ಷಣಾಯೋಜನೆಯ ಕುರಿತೂ ಮತ್ತು ನಮಗಾಗಿ ಹಾಗು ಸಮಸ್ತ ಮಾನವಕುಲಕ್ಕಾಗಿ ದೇವರು ವಾಸ್ತವದಲ್ಲಿ ಮನಸ್ಸಿನಲ್ಲಿಟ್ಟುಕೊಂಡಿರುವುದರ ಕುರಿತೂ ಆಲೋಚಿಸೋಣ. ದೇವರು

1) ಆತನೊಂದಿಗೆ ಪರಿಪೂರ್ಣವಾದ ಅನ್ಯೋನ್ಯತೆ ಹೊಂದಲು ನಮ್ಮನ್ನು ನಡೆಸುವನು

2) ಸಂಪೂರ್ಣವಾಗಿ ಪರಿಪೂರ್ಣವಾದ – ಪುನರುತ್ಥಾನದ ಶರೀರವನ್ನು ಅನುಗ್ರಹಿಸುವನು

3) ಕ್ರಿಸ್ತನೊಂದಿಗೆ ಅಕ್ಕಪಕ್ಕದಲ್ಲಿದ್ದು ಸೇವೆ ಮಾಡಲು ನಮಗೆ ಅನುಮತಿಸುವನು

4) ಕ್ರಿಸ್ತನ ಸ್ವರೂಪ ಮತ್ತು ಸ್ವಭಾವದಲ್ಲಿ – ನಮಗೆ ಪರಿಪೂರ್ಣ ಮಾಡುವನು

5) ನಮ್ಮ ಪ್ರಿಯರೊಂದಿಗೆ ಮತ್ತೆ ಜೊತೆಗೂಡಿಸುವನು

6) ನಮ್ಮ ಎಲ್ಲಾ ದುಃಖ, ನೋವು, ಪಾಪ, ಕೆಟ್ಟದ್ದನ್ನು ತೆಗೆದುಹಾಕುವನು ಮತ್ತು ಪ್ರೀತಿಯು ಆಳುವ ಪರಿಪೂರ್ಣ ಶಾಂತಿಯನ್ನು ಒದಗಿಸುವನು

7) ನಮಗೊಂದು ಪರಿಪೂರ್ಣವಾದ ಹೊಸ ಸೃಷ್ಟಿಯನ್ನು ನೀಡುವನು

ನಾವು ಸಮಯ ತೆಗೆದುಕೊಂಡು ನಮ್ಮ ಭವಿಷ್ಯತ್ತು, ನಮ್ಮ ತ್ರಯೈಕ ದೇವರು, ರಕ್ಷಣಾಯೋಜನೆಯ ಕುರಿತೂ ಹಾಗು ಪ್ರತಿಯೊಬ್ಬರ ನಿಗದಿತ ಸಮಯದಲ್ಲಿ ನಮಗೂ ಎಲ್ಲಾ ಮಾನವಕುಲಕ್ಕೂ ಇದು ಏನು ಅರ್ಥಕೊಡುತ್ತದೆಂಬುದರ ಕುರಿತೂ ತೀವ್ರವಾಗಿ ಚಿಂತನೆಮಾಡೋಣ. ದೇವರು ತನ್ನ ಮಗನನ್ನು ಕಳುಹಿಸುವುದರಲ್ಲಿ ಆತನ ಪ್ರೀತಿಯು ಸಾಬೀತುಪಡಿಸಲಾಯಿತು. ಯೇಸುಕ್ರಿಸ್ತನು ನನಗಾಗಿ ಮತ್ತು ನಿಮಗಾಗಿ ಸತ್ತನು. ಈ ಮೂಲಕ ಆತನು ನಮ್ಮನ್ನು ಪ್ರೀತಿಸುತ್ತಾನೆಂದು ತೋರಿಸಿ ಆತನ ಯೋಗ್ಯತೆ ಹಾಗು ಮಹಿಮೆಯನ್ನು ನಮ್ಮೊಂದಿಗೆ ಹಂಚಿಕೊಳ್ಳುವ ವಾಗ್ದಾನ ಮಾಡುತ್ತಿರುವನು.

ದೇವರು ನಮಗೆ ಪ್ರತಿಯೊಂದನ್ನು ಕೊಡಲು ಮತ್ತು ನಮ್ಮ ಭವಿಷ್ಯತ್ತನ್ನು ಭದ್ರಪಡಿಸಲು ಬಯಸುತ್ತಾನೆ ಮತ್ತು ಇದರ ಬದಲಿಗೆ ಸ್ವಲ್ಪ ಮಾತ್ರ ನಮ್ಮಿಂದ ಕೇಳುತ್ತಾನೆ, ಆತನು ನಮ್ಮಿಂದ ಯಾವ ದೊಡ್ಡ ತ್ಯಾಗವನ್ನು ಬೇಡುತ್ತಿಲ್ಲ ಆದರೆ ಸರಳವಾಗಿ ನಮ್ಮ ನಂಬಿಕೆ, ಭರವಸೆ ಹಾಗು ಆತನಿಗಾಗಿರುವ ನಮ್ಮ ಪ್ರೀತಿಯನ್ನು ಕೋರುತ್ತಿರುವನು.

ನಮ್ಮ ಪ್ರೀತಿಯು ಸಕ್ರಿಯವಾಗಿರುವಾಗ, ನಾವು ಡಿವೈನ್ ಸರ್ವಿಸ್‌ಗಳಲ್ಲಿ ಅನ್ಯೋನ್ಯತೆಯಲ್ಲಿ ಒಂದುಗೂಡುವುದನ್ನು ಕಷ್ಟಕರವೆಂದು ಪರಿಗಣಿಸುವುದಿಲ್ಲ. ನಾವು ಸ್ಪಷ್ಟ ರೀತಿಯಲ್ಲಿ ದೇವರ ಹಾಗು ನಮ್ಮ ನೆರೆಯವನ ಪ್ರತಿ ಇರುವ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ಮಾರ್ಗಗಳನ್ನು ಹುಡುಕಿಕೊಳ್ಳುತ್ತೇವೆ ಮತ್ತು ನಮ್ಮ ವರಗಳಿಂದ ಕರ್ತನ ಸೇವೆ ಮಾಡುವುದರಲ್ಲಿ ಸಕ್ರಿಯರಾಗಿರುತ್ತೇವೆ.

“ಕ್ರಿಸ್ತನಲ್ಲಿ ಒಟ್ಟಿಗಿರುವುದು” ಎಂಬುದು ಈ ವರ್ಷದ ಧ್ಯೇಯವಾಕ್ಯಕ್ಕಿಂತ ಹೆಚ್ಚಿನ ಅರ್ಥ ಹೊಂದಿರುತ್ತದೆ; ಹಂತ ಹಂತವಾಗಿ ನಾವು ಯಾರಾಗಿರಬೇಕು, ಏನಾಗಿರಬೇಕು ಮತ್ತು ಎಲ್ಲಿರಬೇಕೆಂದು ಬಯಸುತ್ತೇವೆ ಎಂಬುದೇ. ಇದು ಭೂತಕಾಲವೂ, ವರ್ತಮಾನಕಾಲವೂ ಆಗಿದೆ ಮತ್ತು ನಾವು ಕ್ರಿಸ್ತನೊಂದಿಗೆ ಶಾಶ್ವತವಾಗಿ ಪರಿಪೂರ್ಣ ಸ್ಥಿತಿಯಲ್ಲಿರುವ ಭವಿಷ್ಯತ್ತೂ ಆಗಿದೆ.

ನಿಮಗೂ ನಿಮ್ಮ ಪ್ರಿಯರಿಗೂ ಒಂದು ಆಶೀರ್ವಾದಮಯವಾದ ಕೃತಜ್ಞತಾರ್ಪಣೆಯನ್ನು ಆಶಿಸುವ,

ಮಾರ್ಕ್ ವೋಲ್